EN/02/April-May/2025


# ಬಿಲೀವರ್ಸ್ ಈಸ್ಟರ್ನ್ ಚರ್ಚ್ ವಿಶ್ವ ಪ್ರಧಾನ ಕಛೇರಿ

ಮೆಟ್ರೋಪಾಲಿಟನ್ ಕಛೇರಿ, ಸಂತ ತೋಮನ ಸಮುದಾಯ, ಕುಟ್ಟಪುರ ಅಂಚೆ, ತಿರುವಲ್ಲಾ – 689103 ಕೇರಳ, ಭಾರತ


# ಕುರುಬನ ಪತ್ರ

ಏಪ್ರಿಲ್ - ಮೇ 2025

ನನ್ನ ಪ್ರೀತಿಯ ಕುರುಬರಿಗೆ ಮತ್ತು ಪವಿತ್ರ ಸಭೆಯ ಎಲ್ಲಾ ವಿಶ್ವಾಸಿಗಳಿಗೆ,

ನಮ್ಮ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನಿಂದ ನಿಮಗೆ ಕೃಪೆಯೂ ಕರುಣೆಯೂ ಶಾಂತಿಯೂ ಆಗಲಿ. ✠.

ನಮ್ಮ ಸಭೆಯ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕ್ಷಣಗಳಲ್ಲಿ ಒಂದಾದ ನಮ್ಮ ಮೆಟ್ರೋಪಾಲಿಟನ್ ಫಾದರ್ ಅಥನೇಷಿಯಸ್ ಯೋಹಾನ್ I ರವರ ಮೊದಲ ಸ್ಮಾರಕದ ವಿಷಯವಾಗಿ ನಿಮ್ಮೆಲ್ಲರ ಗಮನ ಸೆಳೆಯಲು ನಾನು ಇಂದು ನಿಮ್ಮನ್ನು ಉದ್ದೇಶಿಸುತ್ತಿದ್ದೇನೆ:

ನಮ್ಮ ಮೆಟ್ರೋಪಾಲಿಟನ್ ಫಾದರ್ ಅಥನೇಷಿಯಸ್ ಯೋಹಾನ್ I ರವರ ಆಶೀರ್ವಾದದ ಸ್ಮರಣೆಯ ಮೊದಲ ಸ್ಮಾರಕವು ಮೇ 8, 2025 ರಂದು ಅವರ ಶಾಶ್ವತ ವಿಶ್ರಾಂತಿಗೆ ಪ್ರವೇಶಿಸಿ ಒಂದು ವರ್ಷವನ್ನು ಸೂಚಿಸುತ್ತದೆ.

ಈ ಲೋಕದಿಂದ ಅವರ ನಿರ್ಗಮನವನ್ನು ಅರ್ಥಮಾಡಿಕೊಳ್ಳುವುದು ಸಭೆಯಾಗಿ ನಮಗೆ ಖಂಡಿತವಾಗಿಯೂ ಕಷ್ಟಕರವಾಗಿದೆ, ಆದಗ್ಯೂ ಅವರ ಸ್ಮರಣೆಯನ್ನು ಜೀವಂತವಾಗಿಡುವ ಜವಾಬ್ದಾರಿ ನಮ್ಮದಾಗಿದೆ. ಅವರು ನೀಡಿದ ಬೋಧನೆಗಳಿಗೆ ಅನುಗುಣವಾಗಿ ಬದುಕುವ ಮೂಲಕ, ಅವರು ಪ್ರಾರಂಭಿಸಿದ ಕೆಲಸವನ್ನು ಮುಂದುವರಿಸುವ ಮೂಲಕ ಮತ್ತು ಅದನ್ನು ಮುಂದಿನ ಪೀಳಿಗೆಗೆ ರವಾನಿಸುವ ಮೂಲಕ ಅವರ ಜೀವನವನ್ನು ಅನುಕರಿಸುವಂತೆ ನಾನು ನಿಮ್ಮೆಲ್ಲರನ್ನು ಪ್ರೀತಿಯಿಂದ ಒತ್ತಾಯಿಸುತ್ತೇನೆ. ಈ ಜವಾಬ್ದಾರಿಯು ಹೊರೆಯಲ್ಲ, ಆದರೆ ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದು ದೊಡ್ಡ ಸಂತೋಷ ಮತ್ತು ಗೌರವವಾಗಿದೆ - ಇದನ್ನು ನಾವು ಉತ್ಸಾಹ ಮತ್ತು ಬದ್ಧತೆಯಿಂದ ಸ್ವೀಕರಿಸಬೇಕು.

ವಿಶ್ರಾಂತಿಯಲ್ಲಿ ಸೇರಿದ ಪವಿತ್ರ ಸಭೆಯ ನಮ್ಮ ತಂದೆ ಮೆಟ್ರೋಪಾಲಿಟನ್ ಯೋಹಾನ್ I ರವರ ಆಶೀರ್ವಾದದ ಸ್ಮರಣೆಯ ಮೊದಲ ಸ್ಮಾರಕಕ್ಕೆ ಸಿದ್ಧತೆ ನಡೆಸುತ್ತಿದೆ. ಮತ್ತು ನಾವೆಲ್ಲರೂ ನಮ್ಮ ತನುಮನಗಳನ್ನು ಈ ಪವಿತ್ರ ಆಚರಣೆಯಲ್ಲಿ ತೊಡಗಿಸಿಕೊಳ್ಳಬೇಕು. ಒಂದು ಸಭೆಯಾಗಿ, ಪ್ರಾರ್ಥನೆ ಸಲ್ಲಿಸಲು ಮತ್ತು ನಿಧನರಾದ ನಮ್ಮ ಆಧ್ಯಾತ್ಮಿಕ ತಂದೆಯ ಜೀವನ ಮತ್ತು ಪರಂಪರೆಗಾಗಿ ಸರ್ವಶಕ್ತ ದೇವರಿಗೆ ಧನ್ಯವಾದ ಹೇಳಲು ಒಟ್ಟಿಗೆ ಸೇರಿಬರಬೇಕಾಗಿದೆ. ಈ ಸ್ಮಾರಕ ದಿನವನ್ನು ನಿಷ್ಕ್ರಿಯ ಸ್ಮರಣೆಗೆ ನಿಮ್ಮ ನಾಲ್ಕು ಗೋಡೆಗಳ ಒಳಗೆ ದಯವಿಟ್ಟು ಸೀಮಿತಗೊಳಿಸಬೇಡಿ. ಬದಲಾಗಿ, ಒಂದು ಹೆಜ್ಜೆ ಮುಂದೆ ಹೋಗಿ - ವಿಶ್ರಾಂತಿಯಲ್ಲಿ ಸೇರಿದ ತಂದೆ ಮೆಟ್ರೋಪಾಲಿಟನ್ ಯೋಹಾನ್ I ರವರು ನಮಗೆ ತೋರಿಸಿಕೊಟ್ಟಂತೆ ಮತ್ತು ಕಲಿಸಿದಂತೆ ಅವರ ಸ್ಮರಣೆಯನ್ನು ಕಾರ್ಯರೂಪಕ್ಕೆ ತರಲು ಪ್ರೀತಿ ಮತ್ತು ಸಹಾನುಭೂತಿಯಿಂದ ಅಗತ್ಯವಿರುವ ಜಗತ್ತಿಗೆ ಸೇವೆ ಸಲ್ಲಿಸಲು ಪ್ರಯತ್ನಿಸಬೇಕು.

ವಿಶ್ರಾಂತಿಯಲ್ಲಿ ಸೇರಿದ ನಮ್ಮ ಆಧ್ಯಾತ್ಮಿಕ ತಂದೆಯವರ ಜೀವನಶೈಲಿಯ ಪ್ರಮುಖ ಅಂಶಗಳತ್ತ ನಿಮ್ಮ ಗಮನವನ್ನು ಸೆಳೆಯಲು ನಾನು ಬಯಸುತ್ತೇನೆ, ಇದರಿಂದ ನಾವು ಈ ನಿರ್ದಿಷ್ಟ ದಿನದಂದು ಮಾತ್ರವಲ್ಲದೆ ಪ್ರತಿ ದಿನವೂ ಅವರಿಗನುಸಾರವಾಗಿ ಬದುಕಬಹುದು.

1. ಕರುಣೆಯ ಮತ್ತು ದಾನದ ಕಾರ್ಯಗಳು: ವಿಶ್ರಾಂತಿಯಲ್ಲಿ ಸೇರಿದ ನಮ್ಮ ಆತ್ಮೀಕ ತಂದೆಯ ಹೃದಯವು ಬಡವರಿಗಾಗಿ, ರೋಗಿಗಳಿಗಾಗಿ ಮತ್ತು ದಿಕ್ಕಿಲ್ಲದವರಿಗಾಗಿ, ಕೈಬಿಡಲ್ಪಟ್ಟವರಿಗಾಗಿ ಮುರಿಯಲ್ಪಟ್ಟಿತು ಮತ್ತು ಇಂಥವರನ್ನು ಕ್ರಿಸ್ತನು ಪ್ರೀತಿಸಿದಂತೆ ತಾವೂ ಪ್ರೀತಿಸಲು ತ್ಯಾಗಗಳನ್ನು ಮಾಡಿದರು. ಅವರ ನೆನಪಿಗಾಗಿ, ದಾನ ನೀಡುವ ಮೂಲಕ, ರೋಗಿಗಳನ್ನು ಭೇಟಿ ಮಾಡುವ ಮೂಲಕ ಅಥವಾ ನಿಮ್ಮ ಸಮುದಾಯದೊಳಗಿನ ಸರಳ ದಯೆಯ ಕ್ರಿಯೆಗಳ ಮೂಲಕ ಅಗತ್ಯವಿರುವವರನ್ನು ಸಂಧಿಸಲು ನಾನು

ನಿಮ್ಮನ್ನು ಒತ್ತಾಯಿಸುತ್ತೇನೆ.

2. ದೈನಂದಿನ ಪ್ರಾರ್ಥನೆ ಮತ್ತು ಧ್ಯಾನ ಮಾಡುವುದು: ಸಭೆಯಾಗಿ ನಾವು ನಿರಂತರವಾಗಿ ಪ್ರಾರ್ಥಿಸಲು ಮತ್ತು ಯೇಸುವಿನ ಪ್ರಾರ್ಥನೆಯನ್ನು ನಮ್ಮ ದೈನಂದಿನ ಜೀವನದ ಭಾಗವಾಗಿಸಲು ನಮ್ಮ ಮೃತ ತಂದೆಯವರು ಪ್ರೋತ್ಸಾಹಿಸಿದರು. ವೈಯಕ್ತಿಕ ಭಕ್ತಿಗಳು, ಕುಟುಂಬ ಪ್ರಾರ್ಥನೆಗಳು, ದೈವಿಕ ಪ್ರಾರ್ಥನೆಗೆ ಹಾಜರಾಗುವುದು ಮತ್ತು ಯೇಸುವಿನ ಪ್ರಾರ್ಥನೆಯನ್ನು ನಿಷ್ಠೆಯಿಂದ ಪ್ರಾರ್ಥಿಸುವ ಮೂಲಕ ಆಳವಾದ ಪ್ರಾರ್ಥನೆಯ ಜೀವನಕ್ಕೆ ನಾವು ಬದ್ಧರಾಗೋಣ.

3. ಸಭೆ ಮತ್ತು ಸಮುದಾಯಕ್ಕೆ ಸೇವೆ: ನಮ್ಮ ಮೃತ ತಂದೆಯವರು ಪವಿತ್ರ ಚರ್ಚ್ ಅನ್ನು ತಮ್ಮ ಪೂರ್ಣ ಹೃದಯದಿಂದ ಪ್ರೀತಿಸುತ್ತಿದ್ದರು ಮತ್ತು ಅದನ್ನು ನಿರ್ಮಿಸಲು ದಣಿವರಿಯಿಲ್ಲದೆ ಸೇವೆ ಸಲ್ಲಿಸಿದರು. ಅವರು ನಿರಂತರವಾಗಿ ಮಾಡಿದ ಒಂದು ಹೇಳಿಕೆಯೆಂದರೆ, "ಚರ್ಚ್ ಕುರಿತು ಯೋಚಿಸಿ." ನಮ್ಮ ಚರ್ಚ್‌ನ ಬೆಳವಣಿಗೆಗೆ ಮತ್ತು ಆ ಮೂಲಕ ನಮ್ಮ ಸಮುದಾಯದ ಯೋಗಕ್ಷೇಮಕ್ಕಾಗಿ ನಮ್ಮ ಸಮಯ ಮತ್ತು ಪ್ರತಿಭೆಯನ್ನು ನೀಡುವ ಮೂಲಕ ನಾವು ಅವರ ಕೆಲಸವನ್ನು ಮುಂದುವರಿಸೋಣ. ಪ್ಯಾರಿಷ್ ಕಾರ್ಯಕ್ರಮಗಳಿಗೆ ಸಹಾಯ ಮಾಡುವುದು, ಸಭೆಯ ವಿವಿಧ ಸೇವಾ ಇಲಾಖೆಗಳನ್ನು ಬೆಂಬಲಿಸುವುದು ಮತ್ತು ಔಟ್ ರೀಚ್ ಸೇವೆಗಳಲ್ಲಿ ಸಹಾಯ ಮಾಡುವುದು - ಅದು ಯಾವುದೇ ಪ್ರಮಾಣದ ಸೇವೆಯಾಗಿರಲಿ, ಸೇವೆ ಸಲ್ಲಿಸಲು ನಮಗೆ ಲೆಕ್ಕವಿಲ್ಲದಷ್ಟು ಅವಕಾಶಗಳಿವೆ.

4. ಭವಿಷ್ಯದ ಪೀಳಿಗೆಗೆ ನಂಬಿಕೆಯನ್ನು ಕಾಪಾಡುವುದು: ನಮ್ಮ ಮೃತ ತಂದೆ ಮಕ್ಕಳನ್ನು ಪ್ರೀತಿಸುತ್ತಿದ್ದರು ಮತ್ತು ಯಾವಾಗಲೂ ಅವರಿಗೆ ಆದ್ಯತೆ ನೀಡುತ್ತಿದ್ದರು. ಪವಿತ್ರ ಚರ್ಚ್‌ನ ಜೀವನವನ್ನು ಮುಂದಿನ ಪೀಳಿಗೆಗೆ ರವಾನಿಸಲು ನಾವು ಬದ್ಧರಾಗೋಣ. ಭಾನುವಾರ ಶಾಲೆ, ಬಿಲೀವರ್ಸ್ ಯೂತ್, ಸ್ತ್ರೀಯರ ಅನ್ಯೋನ್ಯತೆ ಕೂಟಗಳು, ದೈನಂದಿನ ಶಾಸ್ತ್ರೋಕ್ತಿಕರಣ, ಪ್ರಾರ್ಥನೆ ಮತ್ತು ಅನುಕರಣೀಯ ಜೀವನವನ್ನು ನಡೆಸುವ ಮೂಲಕ ನಮ್ಮ ಮೃತ ತಂದೆಯನ್ನು ಪೋಷಿಸಿದ ಮತ್ತು ನಮ್ಮ ಚರ್ಚ್ ಅನ್ನು ರೂಪಿಸಿದ ನಂಬಿಕೆಯು ನಮ್ಮ ಮುಂದಿನ ಪೀಳಿಗೆಯನ್ನು ಪೋಷಿಸಲು ಮತ್ತು ರೂಪಿಸಲು ಮುಂದುವರಿಯುತ್ತದೆ ಎಂದು ಖಚಿತಪಡಿಸಿಕೊಳ್ಳೋಣ.

ನನ್ನ ಪ್ರಿಯರೇ, ನೀವು ಕೇಳುವವರಾಗಿರುವುದು ಮಾತ್ರವಲ್ಲದೆ, ಅದನ್ನು ಮಾಡುವವರಾಗಿರಬೇಕೆಂದು ನಾನು ನಿಮ್ಮನ್ನು ಒತ್ತಾಯಿಸುತ್ತೇನೆ. ನಮ್ಮ ಸಭೆಯ ಪಿತಾಮಹರಾದ ಮೆಟ್ರೋಪಾಲಿಟನ್ ಅಥಾನೇಷಿಯಸ್ ಯೋಹಾನ್ I ರವರ ಆಶೀರ್ವಾದದ ಸ್ಮರಣೆಯ ಜೀವನ ಶೈಲಿಯನ್ನು ನಾವು ಪೂರ್ಣ ಹೃದಯದಿಂದ ಅಂಗೀಕರಿಸಿಕೊಳ್ಳೋಣ.

ನೆನಪಿಡಿ, ನಾವು ಯೇಸುವಿನ ಕರಗಳಾಗಿ, ಬಾಯಿಯಾಗಿ ಮತ್ತು ಪಾದಗಳಾಗಿರಲು ಕರೆಯಲ್ಪಟ್ಟಿದ್ದೇವೆ - ಇತರರಿಗೆ ಸೇವೆ ಸಲ್ಲಿಸಲು ಮತ್ತು ನಮ್ಮಲ್ಲಿ ಮುದ್ರೆ ಹಾಕಲಾದ ಕ್ರಿಸ್ತನ ಪ್ರತಿರೂಪವನ್ನು ಪ್ರತಿಬಿಂಬಿಸಲು ನಾವು ಕ್ರಿಸ್ತನಂತೆ ಮುಂದುವರಿಯೋಣ.

ಅವರ ನೆನಪು ಶಾಶ್ವತವಾಗಲಿ!

ಪವಿತ್ರ ತ್ರೈಏಕತ್ವ ದೇವರಾದ; ತಂದೆ, ಮಗ ಮತ್ತು ಪವಿತ್ರಾತ್ಮನು ತನ್ನ ಹೇರಳವಾದ ಕೃಪೆ ಮತ್ತು ಕರುಣೆಯಿಂದ ನಮ್ಮನ್ನು ಮುನ್ನಡೆಸಲಿ ಮತ್ತು ಎಲ್ಲಾ ಸಂತರು ಮತ್ತು ಥಿಯೋಟೋಕೋಸ್ ಅವರ ಮಧ್ಯಸ್ಥಿಕೆಗಳು ದೇವರ ಸಿಂಹಾಸನದ ಮುಂದೆ ಈಗ ಮತ್ತು ಯಾವಾಗಲೂ ನಮಗೆ ರಕ್ಷಣೆಯಾಗಲಿ. ✠ ಆಮೆನ್.

ನಿಮ್ಮ ತಂದೆಯ ಪ್ರೀತಿ ಮತ್ತು ಪ್ರಾರ್ಥನೆಗಳೊಂದಿಗೆ,



ಮೋರನ್ ಮೋರ್ ಸ್ಯಾಮ್ಯುಯೆಲ್ ಥಿಯೋಫಿಲಸ್ ಮೆಟ್ರೋಪಾಲಿಟನ್

ದಿನಾಂಕ : 15 ಏಪ್ರಿಲ್ 2025

ಸ್ಥಳ : ವಿಶ್ವ ಪ್ರಧಾನ ಕಛೇರಿ

---

ಗಮನಿಸಿರಿ: ದಯವಿಟ್ಟು ಈ ಪತ್ರವನ್ನು ಎಲ್ಲಾ ವಿಶ್ವಾಸಿಗಳ ಪ್ರೋತ್ಸಾಹಕ್ಕಾಗಿ ಎಲ್ಲಾ ಪ್ಯಾರೀಷ್‌ಗಳಲ್ಲಿ ಓದಿರಿ.